ಮೇಲೆ ಅತೀವ ಒತ್ತಡ ಸೃಷ್ಟಿಮಾಡುತ್ತಿದೆ. ಹಿಂದೆಲ್ಲ ಜನರು ಅಷ್ಟೊಂದು ಹಣವಂತರಾಗಿರುತ್ತಿರಲಿಲ್ಲ. ಆದರೆ ಮಕ್ಕಳು ತರಗತಿಯಿಂದ ನೇರ ಉದ್ಯೋಗ ಕಚೇರಿಗೆ ಹೋಗಬೇಕು, ಹಣ ಸಂಪಾದಿಸಿ ತರಬೇಕು ಎಂದು ಆಶಿಸುತ್ತಿರಲಿಲ್ಲ. ಆದರೆ ಇಂದು ತಂದೆ ತಾಯಿ ಅನುಕೂಲಸ್ಥರಾಗಿದ್ದರೂ ಕೂಡ ಮಕ್ಕಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗದೇ ಇದ್ದಲ್ಲಿ ಬಹಳ ಆತಂಕಪಡುತ್ತಾರೆ. ತಂದೆ ತಾಯಿಯ ಈ ಆತಂಕ ಮಕ್ಕಳ ಮನಸ್ಸಿನಲ್ಲಿ ಒತ್ತಡ ಸೃಷ್ಟಿಸುತ್ತದೆ. ಹೀಗೆ ಅಂಕಗಳನ್ನು ತೆಗೆಯುವುದನ್ನೇ ಪ್ರಧಾನವಾಗಿಸಿಕೊಂಡ ಮೇಲೆ ಅವರು ನೃತ್ಯ ಕಲಿಯಲು ಹೆಚ್ಚು ಸಮಯ ವಿನಿಯೋಗಿಸಿದರೆ ಪೋಷಕರಿಗೇ ಕಿರಿಕಿರಿಯಾಗಿಬಿಡುತ್ತದೆ. ಅಂದರೆ ಇಂದು ಪೋಷಕರಿಗೆ ಮಕ್ಕಳ ಸಂತೋಷಕ್ಕೆ ಬದಲಾಗಿ, ಮಕ್ಕಳು ಹೆಚ್ಚು ಗಳಿಕೆ ಮಾಡಬೇಕೆಂಬ ಆಶಯವೇ ಹೆಚ್ಚಾಗಿದೆ. ಆದರೆ ಹೆಚ್ಚು ಗಳಿಕೆ ಮಾಡಿಯೂ ಮನಸ್ಸಿಗೆ ನೆಮ್ಮದಿ ಇಲ್ಲದೇ ಇದ್ದರೆ ಜೀವನ ಹೇಗೆ ಸಾಗಿಸುವುದು? ಇಂತಹ ಕಲೆಗಳ ಜ್ಞಾನವಿದ್ದಾಗ ಅಂತಹ ಮಕ್ಕಳು ಬದುಕನ್ನು ಸಮತೋಲನದಲ್ಲಿ ನಿಭಾಯಿಸಬಲ್ಲರು.

**◆ ನಿಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಳ್ಳುವಿರಾ?**

ದಕ್ಷಿಣ ಕನ್ನಡದ ಮೂಡುಬಿದ್ರೆಯಲ್ಲಿ ಹುಟ್ಟಿದ ನಾನು ಪ್ರಾಥಮಿಕ ವಿದ್ಯಾಭ್ಯಾಸವನ್ನೆಲ್ಲ ಅಲ್ಲಿಯೇ ಪೂರೈಸಿದೆ. ನನ್ನ ಅಪ್ಪ ಪಿ. ನಾಗರಾಜ್ ಮತ್ತು ಅಮ್ಮ ವರದಾದೇವಿ ಇಬ್ಬರೂ ನನ್ನೊಳಗೆ ಇರುವ ನೃತ್ಯದ ಆಸಕ್ತಿಯನ್ನು ಗುರುತಿಸಿ ಪ್ರೋತ್ಸಾಹಿಸಿದ್ದಾರೆ. 'ಚೋಮನದುಡಿ' ಸಿನಿಮಾದಲ್ಲಿ ಚೋಮನ ಪಾತ್ರ ನಿರ್ವಹಿಸಿದ ವಾಸುದೇವರಾವ್ ಅವರು ನನ್ನ ಸೋದರ ಮಾವ. ಅಮ್ಮ ಹಾರ್ಮೋನಿಯಂ ನುಡಿಸುತ್ತ ಭಜನೆ ಹಾಡುತ್ತಿದ್ದಳು. ಹೀಗೆ ಹಾಡು, ನೃತ್ಯ, ಅಭಿನಯ ಕ್ಷೇತ್ರದ ಕಡೆಗೆ ಆಸಕ್ತಿ ಹೊಂದಿದ್ದ ಕುಟುಂಬದಲ್ಲಿ ನಾನು ಹುಟ್ಟಿದೆ. ಆಗ ಮಂಗಳೂರಿನಲ್ಲಿ ವಾಸಿಸುತ್ತಿದ್ದ ಕೆ. ಮುರಳೀಧರ ರಾವ್ ಅವರು ಮೂಡುಬಿದ್ರೆಗೆ ಬಂದು ನೃತ್ಯತರಗತಿ ನಡೆಸುತ್ತಿದ್ದರು. ಅವರೇ ನನ್ನ ಗುರುಗಳು. ಮೊದಲು ಅವರು ಕಥಕಳಿಯನ್ನು ನನಗೆ ಕಲಿಸಿದ್ದರು. ನಂತರ ನಾನು ಭರತನಾಟ್ಯವನ್ನು ಕಲಿತೆ. ದಸರಾ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಒಮ್ಮೆ ಕರ್ನಾಟಕ ಸಂಗೀತ ಅಕಾಡೆಮಿ ಕಾರ್ಯದರ್ಶಿಗಳಾಗಿದ್ದ ಎಂ.ಎಸ್. ನಟರಾಜ್, ಮೈಸೂರು ಶೈಲಿಯ ನೃತ್ಯಗುರು ಆಸ್ಥಾನ ವಿದುಷಿ ವೆಂಕಟಲಕ್ಷಮ್ಮ ಮತ್ತು ನೃತ್ಯಗುರು ಯು.ಎಸ್. ಕೃಷ್ಣರಾವ್ ಅವರು ಬಂದಿದ್ದರು. ಅದೇ ಸ್ಪರ್ಧೆಯಲ್ಲಿ ನಾನು ಭಾಗವಹಿಸಿದ್ದಾಗ, ನನ್ನ ನೃತ್ಯವನ್ನು ಕಂಡು ಎಂ.ಎಸ್. ನಟರಾಜ್ ಅವರು ಖುಷಿಪಟ್ಟರು. ಅಲ್ಲದೆ ಮದ್ರಾಸ್‌ನ ಕಲಾಕ್ಷೇತ್ರದಲ್ಲಿ ಭರತನಾಟ್ಯ ಅಭ್ಯಸಿಸಲು ಕಳುಹಿಸಿಕೊಡುವಂತೆ ಅಪ್ಪನಿಗೆ ಸೂಚಿಸಿದರು. ಮನೆಯಿಂದ ಮಗಳನ್ನು ಅಷ್ಟು ದೂರ ಕಳುಹಿಸಿಕೊಡಲು ಅಪ್ಪನಿಗೆ ಮನಸ್ಸಿರಲಿಲ್ಲ. ಆ ಸಮಯದಲ್ಲಿ ಕೇರಳದ ಕಲಾಮಂಡಲಂನಲ್ಲಿ ಅಧ್ಯಾಪನದಿಂದ ನಿವೃತ್ತಿ ಹೊಂದಿ ತಮಿಳುನಾಡಿನ ಸೇಲಂನಲ್ಲಿ ವಾಸಿಸುತ್ತಿದ್ದ ರಾಜರತ್ನಂ ಪಿಳ್ಳೈ ಅವರಲ್ಲಿ ಮುರಳೀಧರ ರಾವ್ ಮತ್ತು ನನ್ನ ಅಪ್ಪ ಮಾತನಾಡಿದರು. ಅವರದ್ದು ಪಂದನಲ್ಲೂರು ಶೈಲಿ. ಅವರು ತಿಂಗಳಿಗೊಮ್ಮೆ ಮುರಳೀಧರ ರಾವ್ ಅವರೊಡನೆ ಮೂಡುಬಿದ್ರೆಗೆ ಬಂದು ನನಗೆ ನೃತ್ಯ ಕಲಿಸುತ್ತಿದ್ದರು. ಹೀಗೆ ರಾಜರತ್ನಂ ಪಿಳ್ಳೈ ಮತ್ತು ಮುರಳೀಧರ್ ರಾವ್ ಅವರು ಹಾಕಿಕೊಟ್ಟ ಭದ್ರ ಬುನಾದಿಯ ಮೇಲೆ ನಾನು ನೃತ್ಯದ ಅಭ್ಯಾಸವನ್ನು ಮಾಡುತ್ತಿದ್ದೆ. ವಿದ್ವಾನ್ ಗೋಪಾಲಕೃಷ್ಣ ಅಯ್ಯರ್ ಅವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸವನ್ನೂ ಮಾಡಿದೆ. ಮಂಗಳೂರಿನ ಡಾನ್ ಬಾಸ್ಕೊ ಸಭಾಂಗಣದಲ್ಲಿ ರಂಗಪ್ರವೇಶ ಮಾಡಿದಾಗ ನನಗೆ ಹತ್ತು ವರ್ಷ.

**◆ ಮದುವೆ ಆಗಬೇಕಿದ್ದರೂ ಷರತ್ತು ವಿಧಿಸಿದ್ರಂತೆ ನೀವು?**

ಹೌದು. ಮೂಡುಬಿದ್ರೆ ಮಹಾವೀರ ಕಾಲೇಜಿನಲ್ಲಿ ಬಿ.ಎಸ್ಸಿ. ಓದಿದ ಬಳಿಕ ಮದುವೆಯ ಮಾತುಕತೆ ಆರಂಭವಾಯಿತು. ತನ್ನ ನೃತ್ಯ ಸಹಪಾಠಿಗಳೆಲ್ಲ ಮದುವೆಯಾದ ತಕ್ಷಣ ನೃತ್ಯ ಕ್ಷೇತ್ರದಿಂದ ಹಿಂದೆ ಸರಿಯುತ್ತಿದ್ದುದನ್ನು ಗಮನಿಸುತ್ತಿದ್ದೆ. ಹಾಗಾಗಿ ನೃತ್ಯವನ್ನು ಮುಂದುವರೆಸಲು ಅವಕಾಶ ಕೊಡುವವರನ್ನು ಮಾತ್ರ ಮದುವೆಯಾಗುತ್ತೇನೆ ಎಂದು ಅಪ್ಪನ ಬಳಿ ಹೇಳುತ್ತಿದ್ದೆ. ವಿವಿಧ ಸ್ಪರ್ಧೆಗಳಿಗೆ ನಾನು ಆಗಾಗ ಮೈಸೂರಿಗೆ ಬಂದಾಗ ಕಲಾವಿಮರ್ಶಕ ಹಾಗೂ ಸಂಘಟಕರಾದ ಎಚ್.ಎಸ್. ದೊರೆಸ್ವಾಮಿ ಅವರ ಪರಿಚಯವಾಗಿತ್ತು. ಅವರು ನನ್ನನ್ನು ಮದುವೆಯಾಗುವ